# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2022-23ನೇ ಸಾಲಿನ ಮೀನುಗಾರಿಕೆ ಇಲಾಖೆಯ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ ಮತ್ತು 4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ಅಡಿಯಲ್ಲಿ ದ್ವಿತೀಯ ಕಂತಿನಲ್ಲಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-1) ಆದೇಶ ಸಂಖ್ಯೆ: ಪಸಂಮೀ/ಇ-126/ಮೀಇಯೋ/2022, ದಿನಾಂಕ: 11-04-2022.

2) ಆದೇಶ ಸಂಖ್ಯೆ: ಪಸಂಮೀ/ಇ-127/ಮೀಇಯೋ/2022, ದಿನಾಂಕ: 11-04-2022.

3) ಮೀನುಗಾರಿಕೆ ನಿರ್ದೇಶಕರ ಏಕ ಕಡತ ಪತ್ರ ಸಂಖ್ಯೆ: DoF-ADMNOBGT/21/2022, ದಿನಾಂಕ: 07-05-2022.

25 MAY 2022
4154550

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಚಾಲ್ತಿಯಲ್ಲಿರುವ ವಿವಿಧ ರಾಜ್ಯ ವಲಯ, ಕೇಂದ್ರ ವಲಯ ಮತ್ತು ಕೇಂದ್ರ ಪುರಸ್ಕೃತ ಜಿಲ್ಲಾ ಪಂಚಾಯತ್ ಯೋಜನೆಗಳನ್ನು ಸಂಬಂಧಪಟ್ಟ ಹುದ್ದೆಗಳೊಂದಿಗೆ 2022-23ನೇ ಸಾಲಿಗೆ ಮುಂದುವರೆಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, 2022-23ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.4210.68 ಲಕ್ಷಗಳನ್ನು ಪ್ರಥಮ ಕಂತಿನ ಅನುದಾನವಾಗಿ ಬಿಡುಗಡೆ ಮಾಡಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಇವರ ಪತ್ರದಲ್ಲಿ, ಲೆಕ್ಕ ಶೀರ್ಷಿಕೆ 2405-00-101-0-66-422-423 ರಡಿ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, 2022-23ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ದ್ವಿತೀಯ ಕಂತಿನ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-136 ಮೀಇಯೋ 2022, ಬೆಂಗಳೂರು ದಿನಾಂಕ: 25-05-2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2022-23ನೇ ಸಾಲಿನಲ್ಲಿ ಮೀನುಗಾರಿಕೆ ಇಲಾಖೆಯ ಯೋಜನೆಗಳನ್ನು ಅನುಷ್ಠಾನಗೊಳಿಸಲು ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಹಾಗೂ "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚಗಳು" ರಾಜ್ಯವಲಯದಡಿ ರೂ.3,335.61 ಲಕ್ಷ (ಮೂರು ಸಾವಿರದ ಮುನ್ನೂರ ಮೂವತ್ತೈದು ಲಕ್ಷದ

Kamakshi U.A

ಅರವತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಕೆಳಕಂಡಂತೆ ಲೆಕ್ಕ ಶೀರ್ಷಿಕೆಗಳ ಮುಂದೆ ನಮೂದಿಸಿರುವಂತೆ ದ್ವಿತೀಯ ಕಂತಿನ ಅನುದಾನ ಬಿಡುಗಡೆ ಮಾಡಿದೆ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು | ಲೆಕ್ಕ ಶೀರ್ಷಿಕೆ | ಆಯವ್ಯಯ 2022-23 ರಲ್ಲಿ ಒದಗಿಸಿದ ಅನುದಾನ | 2022-23ರಲ್ಲಿ ದ್ವಿತೀಯ ಕಂತಿನಲ್ಲಿ ಬಿಡುಗಡೆ ಮಾಡಲಾದ ಅನುದಾನ |
|---|---|---|---|---|
| 1) | ಆಡಳಿತ ಮತ್ತು ನಿರ್ದೇಶನ | 2405-00-001-0-01 | 2936.63 | 734.16 |
| 2) | ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ | 2405-00-101-0-03- | | |
| | ಇತರೆ ಖರ್ಚುಗಳು | 059 | 565.00 | 141.25 |
| | ಸಹಾಯಧನ | 106 | 405.00 | 101.25 |
| 3) | ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ | 2405-00-101-0-54- | | |
| | ಸಾಮಾನ್ಯ ವೆಚ್ಚಗಳು | 051 | 200.00 | 50.00 |
| 4) | ನೀಲಿಕ್ರಾಂತಿ / ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಕೇಂಪುಯೋ – ಕೇಂದ್ರದ ಪಾಲು | 2405-00-101-0-58 | | |
| | ಸಹಾಯಧನ | 106 | 3031.5 | 757.88 |
| | ಪರಿಶಿಷ್ಟ ಜಾತಿ ಉಪ ಯೋಜನೆ | 422 | 352.5 | 88.13 |
| | ಗಿರಿಜನ ಉಪ ಯೋಜನೆ | 423 | 141.00 | 35.25 |
| 5) | ನೀಲಿಕ್ರಾಂತಿ / ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ ಕೇಂಪುಯೋ – ರಾಜ್ಯದ ಪಾಲು | 2405-00-101-0-59 | | |
| | ಸಹಾಯಧನ | 106 | 2021.00 | 505.25 |
| | ಪರಿಶಿಷ್ಟ ಜಾತಿ ಉಪ ಯೋಜನೆ | 422 | 235.00 | 58.75 |
| | ಗಿರಿಜನ ಉಪ ಯೋಜನೆ | 423 | 94.00 | 23.50 |
| 6) | ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ, 2013ರಡಿ ಬಳಕೆಯಾಗದೆ ಇರುವ ಮೊತ್ತ | 2405-00-101-0-66 | | |

Kamakshi U.A

| | | | | |
|---|---|---|---|---|
| | ಪರಿಶಿಷ್ಟ ಜಾತಿ ಉಪ ಯೋಜನೆ | 422 | 0.19 | 0.05 |
| | ಗಿರಿಜನ ಉಪ ಯೋಜನೆ | 423 | 0.83 | 0.14 |
| 7) | ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು | 2405-00-103-0-17 | | |
| | ಸಹಾಯಧನ | 106 | 168.00 | 42.00 |
| | ಪರಿಶಿಷ್ಟ ಜಾತಿ ಉಪ ಯೋಜನೆ | 422 | 5.00 | 1.25 |
| 8) | ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ | 2405-00-110-0-02- | | |
| | ಸಹಾಯಧನ | 106 | 125.00 | 31.25 |
| 9) | ಮಂಜುಗಡ್ಡೆ ಸ್ಥಾವರ ಉಪಯೋಗಿಸುವ ವಿದ್ಯುತ್ ಮೇಲೆ ಸಹಾಯಧನ | 2405-00-110-0-03- | | |
| | ಸಹಾಯಧನ | 106 | 400.00 | 100.00 |
| 10) | ಮೀನುಗಾರಿಕೆ ಸಹಕಾರಿ ಸಂಸ್ಥೆಗಳು / ಮೀನುಗಾರರ ಕಲ್ಯಾಣ ಕೇಂ.ಪು.ಯೋ. ಕೇಂದ್ರದ ಪಾಲು | 2405-00-120-0-07 | | |
| | ಸಹಾಯಧನ | 106 | 306.00 | 76.50 |
| 11) | ಮೀನುಗಾರಿಕೆ ಸಹಕಾರಿ ಸಂಸ್ಥೆಗಳು / ಮೀನುಗಾರರ ಕಲ್ಯಾಣ ಕೇಂ.ಪು.ಯೋ. ರಾಜ್ಯದ ಪಾಲು | 2405-00-120-0-08 | | |
| | ಸಹಾಯಧನ | 106 | 306.00 | 76.50 |
| 12) | ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನು ತುಂಬಿಕೊಡುವುದು | 2405-00-195-0-01 | | |
| | ಸಹಾಯಧನ | 106 | 50.00 | 12.50 |
| | | 2405-ಒಟ್ಟು | 11342.65 | 2835.61 |
| 13) | ಮೀನುಗಾರಿಕೆ ಬಂದರುಗಳ ನಿರ್ಮಾಣ-ಕೇಪುಯೋ-ಕೇಂದ್ರದ ಪಾಲು | 4405-00-103-6-01 | | |
| | ಪ್ರಧಾನ ಕಾಮಗಾರಿಗಳು | 139 | 1000.00 | 250.00 |
| 14) | ಮೀನುಗಾರಿಕೆ ಬಂದರುಗಳ ನಿರ್ಮಾಣ-ಕೇಪುಯೋ-ರಾಜ್ಯದ ಪಾಲು | 4405-00-103-6-02 | | |
| | ಪ್ರಧಾನ ಕಾಮಗಾರಿಗಳು | 139 | 1000.00 | 250.00 |
| 15) | ಮೀನುಗಾರಿಕೆ ಬಂದರುಗಳ ಮತ್ತು ಇಳಿದಾಣ ಕೇಂದ್ರಗಳ ನವೀಕರಣ ಮತ್ತು ಹೂಳೆತ್ತುವ ಕಾರ್ಯಕ್ರಮ | 4405-00-104-0-02 | | |
| | ನಿರ್ಮಾಣ | 386 | 3500.00 | - |

| | | | | |
|---|---|---|---|---|
| 16) | ಮೀನುಗಾರಿಕೆ ಕೊಂಡಿ ರಸ್ತೆಗಳ ಸೇತುವೆಗಳ ಮತ್ತು ಜೆಟ್ಟಿಗಳ ನಿರ್ಮಾಣ _ ನಬಾರ್ಡ್ ಸಹಾಯ (ಗ್ರಾ.ಮೂ.ಸೌ.ಅ.ನಿ.) | 4405-00-800-2-03 | | |
| | ನಬಾರ್ಡ್ ಕಾಮಗಾರಿಗಳು | 436 | 200.00 | - |
| | | 4405-ಒಟ್ಟು | 5700.00 | 500.00 |
| | | ಒಟ್ಟು | 17042.65 | 3,335.61 |

ಮೇಲ್ಕಂಡಂತೆ ಬಿಡುಗಡೆ ಮಾಡಲಾದ ಅನುದಾನದ ಹಣವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿ ಕೊಂಡು ಕಡ್ಡಾಯವಾಗಿ ಹಣ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999 ಮತ್ತು ನಿಯಮಗಳು 2000ಗಳನ್ನು ಹಾಗೂ ಖರೀದಿ ನಿಯಮಗಳನ್ನು ಪಾಲಿಸತಕ್ಕದ್ದು ಮತ್ತು ಆರ್ಥಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಖ2/ಪಿಎಂಯು/92/2015-16, ದಿನಾಂಕ: 27-03-2018ರ ಕ್ರಮ ಸಂಖ್ಯೆ 01 ರಿಂದ 04 ರಲ್ಲಿ ಸೂಚಿಸಿರುವಂತೆ ಅನುಷ್ಠಾನಗೊಳಿಸತಕ್ಕದ್ದು.

ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/ಇ-126/ಮೀಇಯೋ/2022, ದಿ: 11-04-2022 ರನ್ವಯ ಮುಂದುವರೆಸಲಾದ ಯೋಜನೆಗಳನ್ನು ಅನುಮೋದಿಸಿರುವಂತೆ ಅನುಷ್ಠಾನ ಗೊಳಿಸತಕ್ಕದ್ದು.

ಸದರಿ ವೆಚ್ಚವನ್ನು 2022-23ನೇ ಸಾಲಿನ ಲೆಕ್ಕ ಶೀರ್ಷಿಕೆ "2405-ಮೀನುಗಾರಿಕೆ" ಮತ್ತು "4405-ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ"ಗಳಡಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್ ಡಿ/1/ಟಿಎಫ್ ಪಿ/2022, ದಿನಾಂಕ: 04-04-2022 ರಲ್ಲಿ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 25/5/2022
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

25/05/2022

ಇವರಿಗೆ

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4. ಜಂಟಿ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ, ತೋಟಗಾರಿಕೆ ಮತ್ತು ಪಸಂಮೀ ಇಲಾಖೆ.

6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
7. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸಂಬಂಧಪಟ್ಟವರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
9. ಕಂಟ್ರೋಲ್ ರೂಮ್-ಕಂ-24x7 ಹೆಲ್ಪ್ ಲೈನ್ (ಸಹಾಯವಾಣಿ), ಮೀನುಗಾರಿಕೆ ಇಲಾಖೆ.
10. ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

ಪ್ರತಿಯನ್ನು

1. ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿಗಳು / ಜಂಟಿ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು, ಪಸಂಮೀ ಇಲಾಖೆ, ವಿಕಾಸಸೌಧ, ಬೆಂಗಳೂರು.